ಮನವರಿಕೆ ಮಾಡಿಕೊಳ್ಳಬೇಕಾದ ಪ್ರಮೇಯ ಇತ್ತು. ಆದರೆ ಈಗ ಆ ಪರಿಸ್ಥಿತಿ ಉಲ್ಟಾ ಹೊಡೆದಿದೆ. ನಿಮಗೆ ಬೇಕೋ, ಬೇಡವೋ, ಶನಿ ಯಾವ ದಿನ ಯಾವ ಹೊತ್ತಿಗೆ ಯಾವ ರಾಶಿಗೆ ಪ್ರವೇಶಿಸುತ್ತಾನೆ, ಅದರ ಪರಿಣಾಮ ನಿಮ್ಮವರೆಗೆ ಬರುತ್ತದೆಯಾ ಎನ್ನುವ ಕುರಿತಾದ ಮಾಹಿತಿ ಟೀವಿ ಹಾಕಿದರೆ ಸಾಕು, ನಿಮ್ಮ ಕಿವಿದೆರೆಗಳ ಮೇಲೆ ಬಿದ್ದೇ ಬೀಳುತ್ತದೆ. ಅವನು ನಿಮ್ಮ ಮನೆಗೆ ಅರ್ಥಾತ್ ರಾಶಿಗೆ ಬಿಜಯಂಗೈದಿದ್ದಾನೆಂದಾದರೆ ಎದೆಬಡಿತದ ಲಯ ತಪ್ಪುತ್ತದೆ, ಕ್ಷಣದ ಮಟ್ಟಿಗಾದರೂ. ಆಯ್ತು, ನೀವೇನೋ ಬಚಾವಾಗಿದ್ದೀರಿ, ನಿಮ್ಮ ಮನೆಮಂದಿಯಲ್ಲಿ ಯಾರ ಮೇಲಾದರೂ ಅವನ ದೃಷ್ಟಿ ಬಿದ್ದಿದೆಯೇ ಎಂದು ತಿಳಿದುಕೊಳ್ಳುವ ತವಕ. ಅಂತಾದ್ದೇನಿಲ್ಲದಿದ್ದರೆ ಸಮಾಧಾನದ ಸಣ್ಣ ನಿಟ್ಟುಸಿರು. ಒಂದೊಮ್ಮೆ ನಿಮ್ಮ ಕುಟುಂಬ ವಲಯದಲ್ಲಿ ಯಾರ ಮೇಲಾದರೂ ಶನಿಯ ದೃಷ್ಟಿ ಬಿದ್ದಿದೆಯಾ? ಗಾಬರಿ ಬೇಡ. ಎಲ್ಲಕ್ಕೂ ಪರಿಹಾರವಿದೆ. ಶನಿಗೆ ಶಾಂತಿ ಮಾಡಿ ಅವನನ್ನು ತೃಪ್ತಿಪಡಿಸಿಬಿಟ್ಟರೆ ಅವನು ನಿಮ್ಮ ತಂಟೆಗೆ ಬರುವುದಿಲ್ಲ, ಬಂದರೂ ಹೆಚ್ಚು ಪೀಡಿಸುವುದಿಲ್ಲ. ಈ ವಿಷಯ ಶನಿಯನ್ನು ನಂಬುವ ಎಲ್ಲಾ ನಿಷ್ಠಾವಂತರಿಗೂ ಗೊತ್ತಿದೆ ಅನ್ನುತ್ತಿರುವಾಗ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಒಂದು ಪದ್ಯ ನೆನಪಾಗುತ್ತಿದೆ,

'ನಂಬದಿರ್ದನು ತಂದೆ
ನಂಬಿದನು ಪ್ರಹ್ಲಾದ,
ನಂಬಿಯೂ ನಂಬದಿರುವಿಬ್ಬಂದಿ ನೀನು
ಕಂಬದಲೊ, ಬಿಂಬದಲೊ, ಮೋಕ್ಷವವನಿಂಗಾಯ್ತು,
ಸಿಂಬಳದ ನೊಣ ನೀನು, ಮಂಕುತಿಮ್ಮ...'

ನಂಬುವವರ ಕುರಿತು ದೂಸರಾ ಮಾತಿಲ್ಲ. ಇಬ್ಬಂದಿಗಳೂ ಕೂಡಾ ಸುರಕ್ಷತೆಯ ದೃಷ್ಟಿಯಿಂದ ತಮ್ಮ ನಿಲುವಿನಲ್ಲಿ ಸ್ವಲ್ಪ ರಾಜಿ ಮಾಡಿಕೊಳ್ಳುತ್ತಾರೆ, ಅದೂ ಶನಿಯಂತವರ ವಿಷಯದಲ್ಲಿ ಜಾಗ್ರತೆ ವಹಿಸಿದರೆ ತಮಗೇ ಕ್ಷೇಮ ಎಂದು ಅವರ ಅಂತರಂಗ ಅವರಿಗೆ ಬೋಧನೆ ಮಾಡಿಬಿಡುತ್ತದೆ. ಪೇಟೆ, ಪಟ್ಟಣಗಳ ಹೆಚ್ಚಿನ ದೇವಸ್ಥಾನಗಳಲ್ಲಿ, ಅವು ಚಿಕ್ಕದಿರಲಿ, ದೊಡ್ಡದಿರಲಿ, ಸಾಮೂಹಿಕ ಸತ್ಯನಾರಾಯಣ ಪೂಜೆ, ಸಂಕಷ್ಟಹರ ಚತುರ್ಥಿಗಳಂತೆ ಗ್ರಹಗಳು ತಾವಿರುವ ರಾಶಿಯಿಂದ ಮುಂದಿನ ಮನೆಗೆ ಅಡಿ ಇಟ್ಟಾಗ ಯಾವ್ಯಾವ ರಾಶಿಯವರಿಗೆ ತೊಂದರೆ, ತಾಪತ್ರಯ ಅಮರಿಕೊಳ್ಳುತ್ತದೋ ಆಯಾ ರಾಶಿಯವರಿಗೆ ಸಾಮೂಹಿಕ ಸಂಕಲ್ಪ ಮಾಡಿಸಿ ಶಾಂತಿ ಮಾಡಿಸುವ ಕ್ರಮ ಇತ್ತೀಚಿನ ವರ್ಷಗಳಲ್ಲಿ ಮಾಮೂಲಾಗಿದೆ. ಜೇಬಿಗೆ ಹೆಚ್ಚಿನ ಹೊರೆ ಬೀಳದ ನೂರಿನ್ನೂರು ರೂಪಾಯಿಗಳ ವ್ಯವಹಾರ. ದುಡ್ಡು ಕೊಟ್ಟು, ಚೀಟಿ ಬರೆಸಿ, ಶಾಂತಿ ಮಾಡಿಸಿ ನೆಮ್ಮದಿ ಕಂಡುಕೊಳ್ಳುತ್ತಾರೆ ನಂಬುವ ಮಂದಿ. ಬೇರೆ ಗ್ರಹಗಳು ಎಲ್ಲಿಗೆ ಬಂದರೂ, ಎಲ್ಲಿಗೆ ಹೋದರೂ, ಹೆಚ್ಚು ತಲೆ ಕೆಡಿಸಿಕೊಳ್ಳದವರಿಗೆ 'ಶನಿ' ಅಂದಕೂಡಲೆ ಅದೇನೋ ಭಯ, ಭೀತಿ. 'ದುಷ್ಟರನ್ನು ಕಂಡರೆ ದೂರ ಇರು' ಎನ್ನುವ ಗಾದೆ ಮಾತು ಇಲ್ಲಿ ಸಮರ್ಪಕವಾಗಲಿಕ್ಕಿಲ್ಲ. ದುಷ್ಟರೇ ಸನಿಹ ಬಂದರೆ ಮಾಡಬೇಕೇನು? ಓಲೈಸಿ ಸಂತೃಪ್ತಿಪಡಿಸುವುದು ಉಳಿದುಕೊಂಡಿರುವ ಮಾರ್ಗ. ಇಷ್ಟಕ್ಕೂ ಶನಿ ಎನ್ನುವ ಗ್ರಹ ಎಂತವರನ್ನೂ ನಡುಗಿಸಬಲ್ಲಷ್ಟು ದುಷ್ಟನೇ? ನೀಚನೇ? ಈ ಕುರಿತು ಮಾತಾಡುವಷ್ಟು ಜ್ಯೋತಿಷ್ಯ ಪರಿಣತಿ ನನಗಿಲ್ಲ. ಆದರೆ ದಂಡಿಗೆ, ದಾಳಿಗೆ ಹೆದರದವರು ತಟಕಪ್ಪನಿಗೆ ಹೆದರಿದಂತೆ ಎಲ್ಲೋ ಇರುವ ಶನಿಗೆ ಜನರು ಅಂಜುವ ಕುರಿತು ನನಗೆ ಮನದಟ್ಟಾಗಿದ್ದು ದೇವಸ್ಥಾನವೊಂದರಲ್ಲಿ